ನಾಯಕನಾಗಿ ಪೂರ್ಣ ಮತ್ತು ಸಂತೋಷದಿಂದ ಇದನ್ನು ಒಪ್ಪಿಕೊಳ್ಳುತ್ತೇನೆ.

ಅಧ್ಯಕ್ಷರು : ಈಗ ನಿರ್ಣಯವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ನಿರ್ಣಯ ಈ ರೀತಿ ಇದೆ;–

"ಸಂಸತ್ತಿನ ಉಭಯ ಸದನಗಳಿಂದಲೂ ಅಂಗೀಕರಿಸಲ್ಪಟ್ಟ ರೂಪದಲ್ಲಿರುವ ಸಂವಿಧಾನದ 368(2)ನೇ ಅನುಚ್ಛೇದದ (ಕ) ನಿಯಮದ ವ್ಯಾಪ್ತಿಯಲ್ಲಿ ಬರುವ 1992ನೇ ಇಸವಿಯ ಸಂವಿಧಾನದ (76ನೇ ತಿದ್ದುಪಡಿ) ವಿಧೇಯಕವನ್ನು ಈ ಸದನವು ಸ್ಥಿರೀಕರಿಸುತ್ತದೆ.

ನಿರ್ಣಯವು ಸರ್ವಾನುಮತದಿಂದ ಅಂಗೀಕಾರವಾಯಿತು.

ವಿಷಯ :– ಕಾವೇರಿ ಜಲ ವಿವಾದದ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ) :– ಮಾನ್ಯ ಅಧ್ಯಕ್ಷರೆ, ಕಾವೇರಿ ನೀರಿನ ತೀರ್ಪು ನಮಗೆ ಮರಣ ಶಾಸನವಾಗಿದೆ. ಅದರ ಬಗ್ಗೆ ನಾವು ಸುದೀರ್ಘವಾಗಿ ಚರ್ಚೆ ಮಾಡಬೇಕು. ಅದರ ಜೊತೆಗೆ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಪದೇ ಪದೇ ಒತ್ತಾಯ ಮಾಡುತ್ತಿದ್ದೇನೆ. ಸದನದ ಒಳಹೊ ಮತ್ತು ಹೊರಗಡೆ ಎರಡೂ ಕಡೆ ಒತ್ತಾಯ ಮಾಡುತ್ತಿದ್ದೇನೆ ನೀವು ಸರ್ಕಾರದ ಸ್ಪಷ್ಟವಾದ ನಿಲುವನ್ನು ತಿಳಿಸಬೇಕು ಹಾಗೂ ಈಗಿನ ನ್ಯಾಯಮಂಡಳಿಯನ್ನು ನಾವು ಬಹಿಷ್ಕಾರ ಮಾಡಿದ್ದೇವೆ. ಇದು ನಮ್ಮ ಸರ್ಕಾರದ ನಿಲುವು ಎಂದು ತಾವು ಹೇಳಬೇಕು. ನಾನು ನ್ಯಾಯಮಂಡಳಿಯ ಬಗ್ಗೆ ಗೌರವ ಇಟ್ಟುಕೊಂಡವನು. ಆದರೆ ನ್ಯಾಯಮಂಡಳಿಯನ್ನು ನೇಮಕ ಮಾಡುವಾಗ ಪ್ರಥಮವಾಗಿ ವಿರೋಧ ಮಾಡಿದವನು ನಾನು. ಇವತ್ತು ಆ ನ್ಯಾಯಮಂಡಳಿಯ ತೀರ್ಪನ್ನು ನೋಡಿದಾಗ ಆ ತೀರ್ಪು ಸಮಗ್ರ ಕನ್ನಡಿಗರ ಮರಣ ಶಾಸನಕ್ಕೆ ಸರಿಸಮಾನವಾದ ತೀರ್ಪಾಗಿದೆ ಇವತ್ತು ಈ ಸಭೆಯಲ್ಲಿ ಈ ತೀರ್ಪಿನ ಬಗ್ಗೆ ಪ್ರತಿಭಟನೆ ಮಾಡಲೇಬೇಕು. ಯಾವರೀತಿ ಮಾಡಬೇಕೆಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈ ಸದನದ ಗಾಂಭೀರ್ಯತೆ, ಸದನದ ಗೌರವ, ಸದನದ ಒಂದು ಶಕ್ತಿ, ಸದನದ ವ್ಯವಸ್ಥೆ, ಸದನದ ಅಧಿಕಾರ, ಎಲ್ಲ ನನಗೆ ಗೊತ್ತಿದೆ. ಆದರೂ ಸಹಿತ ಇಂತಹ ಒಂದು ತೀರ್ಪನ್ನು ಆ ನ್ಯಾಯಮಂಡಳಿಯ ಸದಸ್ಯರು ಕೊಟ್ಟಿದ್ದಾರೆ. ಇದನ್ನು ನಾವು ಸಂಪೂರ್ಣವಾಗಿ ತಿರಸ್ಕರಿಸಬೇಕು. ನ್ಯಾಯಮಂಡಳಿಯನ್ನು ಬಹಿಷ್ಕರಿಸಬೇಕು. ಇದರ ಜೊತೆಗೆ ನ್ಯಾಯಮಂಡಳಿಯ ಸದಸ್ಯರ ನಡುವಳಿಕೆಯ ಬಗ್ಗೆ ಈ ರಾಜ್ಯದ ಹಿರಿಯ ನಾಯಕರು ಹಾಗೂ ಲೋಕಸಭಾಸದಸ್ಯರು ಆದ ಶ್ರೀಮಾನ್ ಹೆಚ್. ಡಿ. ದೇವೇಗೌಡರು ಅಲ್ಲಿನ ಹೈಕೋರ್ಟಿನಲ್ಲಿ ಟ್ರಿಬ್ಯುನಲ್‌ನ ನ್ಯಾಯಾಧೀಶರ ನಡವಳಿಕೆ ಬಗ್ಗೆ ಒಂದು ದಾವೆಯನ್ನು ಹಾಕಿದ್ದಾರೆ . ಇದೆಲ್ಲವೂ ನಡೆದಿರುವಾಗ ಕರ್ನಾಟಕ ಸರ್ಕಾರ ಕಣ್ಣುಮುಚ್ಚಿಕೊಂಡು ಕುಳಿತುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಕನ್ನಡ ನಾಡಿನ ಸಮಗ್ರ ಜನತೆಯ ಪರವಾಗಿ ಈ ತೀರ್ಪನ್ನು ಸದನದಲ್ಲಿ ನಾನು ಸುಡಬೇಕೆಂದು ಮಾಡಿದ್ದೇನೆ. ಅಂದರೆ ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ತಮಗೆ ಹೇಳದೆ ಈ ರೀತಿ ಮಾಡಬಾರದು ಅದು ನನಗೆ ಗೊತ್ತಿದೆ. ಆದರೂ ಸಹಿತ ಇಂತಹ ಪರಿಸ್ಥಿತಿಗೆ ನಾವು ತಲಪಿದ್ದೇವೆ ಇದಕ್ಕೆ ಕಾರಣವೇನು? ನಮ್ಮ ನಾಡಿನ ಜನತೆಗೆ ಕಾವೇರಿ ಬಗ್ಗೆ ಕೊಟ್ಟ ತೀರ್ಪು ಏನಿದೆ, ಇಂತಹ ತೀರ್ಪು ಕನ್ನಡನಾಡಿಗೆ ಎಂದೂ ಬಂದಿರಲಿಲ್ಲ. ಈ ಸಭೆಯ ಘನತೆ ಗೌರವ ಗಾಂಭೀರ್ಯತೆಯ ಬಗ್ಗೆ ಚಿಂತನೆ ಮಾಡಿದ್ದೇನೆ. ಆದರೂ ನನ್ನ ನೋವನ್ನು ಪ್ರತಿಭಟಿಸತಕ್ಕ ರೀತಿ ಈ ತೀರ್ಪನ್ನು ಸದನದಲ್ಲಿ ಸುಡಲೇಬೇಕಾಗಿದೆ. ತಾವು ನನಗೆ ಏನೂ ಮಾಡಿದರೂ ಚಿಂತೆಯಿಲ್ಲ.

ಅಧ್ಯಕ್ಷರು : ನೀವು ತೀರ್ಪನ್ನು ಸುಡಲಿಕ್ಕೆ ಹೊರಟು ಸದನ ಸುಟ್ಟುಹಾಕಿಬಿಟ್ಟರೆ?

ಶ್ರೀ ವಾಟಾಳ್‌ನಾಗರಾಜ್ : ಇಲ್ಲ.

ಅಧ್ಯಕ್ಷರು : ಮಾನ್ಯ ಸದಸ್ಯರೇ ಇಲ್ಲಿ ನೋಡಿಸ ಇಲ್ಲಿ ಎಲ್ಲ ಪೂರ್ತಿ ಮರ ಇದೆ.

ಶ್ರೀ ಬಸವರಾಜರಾಯ ರೆಡ್ಡಿ : ಮರದ ಮೇನೆ ಕಾರ್ಪೆಟ್ ಇದೆ .

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ವಾಟಾಳ್‌ನಾಗರಾಜ್‌ರವರು ಬಹಳ ಹಿರಿಯ

ಸದಸ್ಯರು. ಯಾವುದೇ ತೀರ್ಪು ಇರಲಿ ತೀರ್ಪನ್ನು ಸುಟ್ಟು ಹಾಕುತ್ತೇನೆ ಎನ್ನುವ ಪದವನ್ನು ಏನು ಬಳಸಿದ್ದಾರೆ, ಅದನ್ನು ತಾವು ದಯಮಾಡಿ ಕಡತದಿಂದ ತೆಗೆದುಹಾಕಬೇಕು.

ಶ್ರೀ ವಾಟಾಳ್ ನಾಗರಾಜ್ : ಸುಟ್ಟುಹಾಕುತ್ತೇನೆ ಎನ್ನುವ ಶಬ್ದ ಏನಿದೆ ಅದನ್ನು ಕಡತದಿಂದ ತೆಗೆದುಹಾಕುವುದರಿಂದ ಏನೂ ಉಳಿದಿಲ್ಲ ಈಗ ಅದನ್ನು ನಾನು ಸುಡುತ್ತೇನೆ. ನಾನು ಈ ಸದನದ ಗೌರವಕ್ಕೆ ಚ್ಯುತಿ ತರಬೇಕೆಂಬ ಈ ಸದನಕ್ಕೆ ಅತ್ಯಂತ ಉನ್ನತವಾದ ಪರಂಪರೆ ಇದೆ. ಅದಕ್ಕೆ ಚ್ಯುತಿ ತರಬೇಕು ಎಂಬ ಮನಸ್ಸು ನನಗಿಲ್ಲ. ಆದರೆ ಇವತ್ತು ನನಗೆ ನೋವಾಗಿದೆ, ಈ ರಾಜ್ಯದ ನಾಲ್ಕೂವರೆ ಕೋಟಿ ಕನ್ನಡಿಗರಿಗೆ ಆಗಿರತಕ್ಕ ಅನ್ಯಾಯದ ಈ ತೀರ್ಪಿನ ಬಗ್ಗೆ ನಾವು ಪ್ರತಿಭಟನೆ ಮಾಡಲೇಬೇಕಾಗಿದೆ. ಅಂತಹ ಒಂದು ಅವಕಾಶ ನನಗೆ ಈಗ ಸಿಕ್ಕಿದೆ. ಅತ್ಯಂತ ಘೋರ ಅನ್ಯಾಯದ ತೀರ್ಪನ್ನು ನಾನು ಸುಡಲೇಬೇಕಾಗಿದೆ. ನಿಮ್ಮನ್ನು ನಾನು ಹೊಣೆ ಮಾಡುತ್ತಿಲ್ಲ. ಈ ಸಭೆಗೆ ಅಗೌರವ ತರಬೇಕೆನ್ನುವ ಉದ್ದೇಶವಿಲ್ಲ. ಆದ್ದರಿಂದ ತಮಗೆ ತಿಳಿಸುತ್ತಿದ್ದೇನೆ. ವಾಟಾಳ್ ನಾಗರಾಜ್‌ರವರು ಏನೂ ನನಗೆ ತಿಳಿಸದೆ ಹೇಗೆ ಸುಟ್ಟರು ಎಂದು ತಾವು ಮನಸ್ಸಿನಲ್ಲಿ ನೋವುಪಟ್ಟುಕೊಳ್ಳಬಾರದು ಎಂದು ತಮಗೆ ಈ ಮಾತನ್ನು ಹೇಳುತ್ತಿದ್ದೇನೆ.

ಅಧ್ಯಕ್ಷರು : ಮಾನ್ಯಸದಸ್ಯರು ಸ್ವಲ್ಪ ಜೇಬಿಗೆ ಕೈ ಹಾಕಬೇಡಿ. ಸ್ವಲ್ಪ ಕುಳಿತುಕೊಳ್ಳಿ.

(ಈ ಹಂತದಲ್ಲಿ ಮಾನ್ಯಸದಸ್ಯರಾದ ವಾಟಾಳ್‌ನಾಗರಾಜ್‌ರವರು ಲೈಟರ್‌ನಿಂದ ಕಾವೇರಿ ನ್ಯಾಯಿಮಂಡಳಿ ತೀರ್ಪಿನ ಪ್ರತಿಗೆ ಬೆಂಕಿ ಇಟ್ಟರು.)

(ಗೊಂದಲ)

(ಮಾನ್ಯ ಸದಸ್ಯರಾದ ಕಾಗೋಡು ತಿಮ್ಮಪ್ಪನವರು ಪ್ರತಿಭಟಿಸಿದರು)

ಅಧ್ಯಕ್ಷರು : ಇದು ಬಹಳ ತಪ್ಪು. ಮಾನ್ಯ ವಾಟಾಳ್ ನಾಗರಾಜ್‌ರವರೆ, ನಿಮ್ಮ ಪ್ರತಿಭಟನೆ ತೋರಿಸುವುದಕ್ಕೆ ವಿಧಿವಿಧಾನಗಳಿವೆ.

ಶ್ರೀ ವಾಟಾಳ್ ನಾಗರಾಜ್ : ನೀವು ನನ್ನನ್ನು ಈ ಸದನದಿಂದ ಹೊರಗೆ ಹಾಕಿದ್ದರೂ ಚಿಂತೆ ಇಲ್ಲ. ನಾನು ಈ ತೀರ್ಪನ್ನು ವಿರೋಧ ಮಾಡಿಯೇ ಮಾಡುತ್ತೇನೆ.

ಅಧ್ಯಕ್ಷರು :– ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು :–ಈ ತೀರ್ಪಿನ ಪರವಾಗಿ ಇರತಕ್ಕಂಥ ಕನ್ನಡಿಗರನ್ನು ನಾನು ಕಾಣೆ. ಈ ಮಧ್ಯಂತರ ತೀರ್ಪು ಏನಿದೆ, ಅದರ ಪರವಾಗಿ ಇರತಕ್ಕಂಥ ಕನ್ನಡಿಗನು ನನಗಿನ್ನೂ ಸಿಕ್ಕಿಲ್ಲ. ಆದ್ದರಿಂದ ನೀವು ಎದ್ದುನಿಂತಾಗ ಈ ಸಭೆಯ ಘನತೆ ಗೌರವವನ್ನು ಎತ್ತಿ ಹಿಡಿಯಬೇಕು.

ಶ್ರೀ ಆರ್. ನಾರಾಯನ್ ;– ಮಾನ್ಯ ಅಧ್ಯಕ್ಷರೇ,

(ಗೊಂದಲ)

ಅಧ್ಯಕ್ಷರು :– ನೀವು ಹೇಳಬೇಕು ಎನ್ನುವುದನ್ನು ನಾನು ಹೇಳುತ್ತಿದ್ದೇನೆ.

ಶ್ರೀ ಆರ್. ನಾರಾಯಣ ;– ಕ್ಷಮಿಸಿ.

ಅಧ್ಯಕ್ಷರು :– ಕ್ಷಮಿಸಿದ್ದೇನೆ. ಈ ಸಭೆಯ ಘನತೆ ಗೌರವವನ್ನು ಎತ್ತಿಹಿಡಿಯುವುದರಲ್ಲಿ ಪ್ರತಿಯೊಬ್ಬ ಮಾನ್ಯ ಸದಸ್ಯರ ಜವಾಬ್ದಾರಿ ಇದೆ, ಹೊಣೆಗಾರಿಗೆ ಇದೆ. ಆದರೆ ನಿಮ್ಮ ಇತಿಮಿತಿಗಳನ್ನು ನೀವು ಅರ್ಥಮಾಡಿಕೊಳ್ಳಬೇಕು. ಈ ತೀರ್ಪಿನ ಪ್ರತಿಯನ್ನು ಇಲ್ಲಿ ಸುಡತಕ್ಕಂಥಾದ್ದು ಸರಿಯಲ್ಲ. ಪ್ರತಿಯೊಬ್ಬ ಮಾನ್ಯ ಸದಸ್ಯರಿಗೂ ಕೂಡ ತಮ್ಮ ವಿರೋಧವನ್ನು ವ್ಯಕ್ತಪಡಿಸುವ ಮೂಲಭೂತ ಸ್ವಾತಂತ್ರ್ಯ ಇದೆ. ಮೂಲಭೂತ ಸ್ವಾತಂತ್ರ್ಯವನ್ನು ವ್ಯಕ್ತಪಡಿಸುವ ಕಾಲದಲ್ಲಿ ಸಮ್ಮ ಸಭೆಯ ನಿಯಮಾವಳಿಗಳ ಚೌಕಟ್ಟಿನಲ್ಲಿ ನೀವು ವಿರೋಧವನ್ನು ವ್ಯಕ್ತಪಡಿಸಬೇಕಾಗುತ್ತದೆ. ಇಲ್ಲದೇಹೋದರೆ ಅದು ಸಭಾನಿಂದನೆ ಆಗುತ್ತದೆ. ನಿಮ್ಮ ವಿರೋಧ ಸಭಾ ನಿಂದನೆಯಾಗಿ ಪರಿಣಮಿಸಬಹುದು

ಎಂಬುದರ ಬಗ್ಗೆ ಕಾಳಜಿ ನಿಮಗೆ ಇರಬೇಕು. ಆ ದೃಷ್ಟಿಯಿಂದ ನಾವು ಏನು ಬೇಕಾದರೂ ಮಾಡಬಹುದು, ಆ ಸ್ವಾತಂತ್ರ್ಯ ನಮಗೆ ಇದೆ ಎಂದು ಸಭೆಯ ಹೊರಗಡೆ ಎಷ್ಟೋ ಸಾರಿ ಮಾಡಿದ್ದೀರಿ. ಅದನ್ನು ಇನ್ನೂ ಮುಂದುವರಿಸಿಕೊಂಡು ಹೋಗಬಹುದು. ಆದರೆ ಈ ಸಭೆಯ ಒಳಗಡೆ ಮಾತ್ರ ತಾವು ದಯವಿಟ್ಟು.....(ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್ ಅವರು ಕುಳಿತುಕೊಂಡೇ ಮಾತನಾಡಿದ್ದನ್ನು ಗಮನಿಸಿ) ಮೆಂಬರ್ ಶಿಪ್ ಹೋಗುವ ಪ್ರಶ್ನೆ ಅಲ್ಲ. ಆ ದೃಷ್ಟಿಯಿಂದ ನೀವು ಆಲೋಚನೆ ಮಾಡಬೇಕು.

ಶ್ರೀ ವಾಟಾಳ್ ನಾಗರಾಜ್ : ನಾನು ತಮಗೆ ಹೇಳಿದ್ದೇನೆ. ನಾನು ನನ್ನ ಪ್ರತಿರೋಧವನ್ನು ವ್ಯಕ್ತ ಮಾಡುವಾಗ ಸಭೆಯ ಘನತೆಯನ್ನು ಕಾಪಾಡುತ್ತೇನೆ ಎನ್ನುವುದರಲ್ಲಿ ಎರಡನೇ ಅಭಿಪ್ರಾಯವಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, ಈಗ ಪ್ರತಿಭಟನೆಯನ್ನು ಮಾನ್ಯ ಸದಸ್ಯರು ಮಾಡಲಿಕ್ಕೆ ಅವಕಾಶ ಇದೆ. ಅದಕ್ಕೆ ಕೆಲವಾರು ನಿಯಮಗಳೂ ಇವೆ. ಕೆಲವು ಸಾರಿ ನಿಯಮಗಳ ಸುತ್ತ ಕೂಡ ಹೋಗುವುದಿದೆ. ಆದರೆ ಇವತ್ತು ಅವರ ಕೈಯಲ್ಲಿ ಬೆಂಕಿ ಇದೆ. ಒಂದು ಕೈಯಲ್ಲಿ ಬೆಂಕಿಯನ್ನು ಹಿಡಿದುಕೊಂಡು I think it is objectionable. First, he should surrender and that and then only he is entitled to speak. Unless that is surrendered, he should not be allowed to speak.

ಅಧ್ಯಕ್ಷರು : ಕಳಿಸಿಕೊಡಿ. ನಾನು ಎಕ್ಸಾಮಿನ್ ಮಾಡುತ್ತೇನೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನನ್ನ ಜೇಬಲ್ಲಿ ಕಡ್ಡಿಪೆಟ್ಟಿಗೆ ಇದೆ. ಅವರ ಜೇಬಲ್ಲಿ ಇಲ್ವಾ? ಹಾಗಿದ್ದರೆ ಯಾರ್ಯಾರ ಜೇಬಲ್ಲಿ ಬೆಂಕಿಪೊಟ್ಟಣ ಇದೆಯೆಂದು ಅವರ ಜೇಬುಗಳನ್ನು ಚೆಕ್ ಮಾಡಿಬಿಡಿ.

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್‌ರವರೇ, ಅವರ ಕಡ್ಡಿಪೆಟ್ಟಿಗೆ ಏನಿದೆ, ಅದನ್ನು ಅವರು ಸದುಪಯೋಗ ಮಾಡುತ್ತಿದ್ದಾರೆ. ಸದನದ ಹೊರಗಡೆ ಒಳಗಡೆ ಅಲ್ಲ.

(ಗೊಂದಲ)

ಅಧ್ಯಕ್ಷರು : ಸಭಾನಾಯಕರು.....

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿ) ತಾವು ಹೇಳಿದಂತೆ ನಿಯಮಾವಳಿ ಚೌಕಟ್ಟಿನಲ್ಲಿ ಗೌರವಾನ್ವಿತ ಸದಸ್ಯರು ಯಾರೇ ಇರಬಹುದು, ಅವರು ತಮ್ಮ ಪ್ರತಿಭಟನೆ ಇತ್ಯಾದಿ ವ್ಯಕ್ತಪಡಿಸುವುದಕ್ಕೆ ಸಾಧ್ಯತೆ ಇದ್ದೇ ಇದೆ. ಅದನ್ನು ಮಾತಿನ ಮೂಲಕ ವಿರೋಧ ಮಾಡುವುದು, ಕೆಲವೊಮ್ಮೆ ನಾವು ಧರಣಿ ಕೊಡುವುದೆಲ್ಲ ಕಂಡಿದ್ದೇವೆ. ಆದರೆ ಇವತ್ತು ಮಾನ್ಯ ಸದಸ್ಯರು ತಮ್ಮ ಆಕ್ರೋಶವನ್ನು.....

ಪ್ರೊ: ಎಂ.ಡಿ. ನಂಜುಂಡಸ್ವಾಮಿ : ಮಾನ್ಯ ಅಧ್ಯಕ್ಷರೇ, ನಾನು ಮಧ್ಯೆ ಸ್ವಲ್ಪ ಪ್ರವೇಶ ಮಾಡುತ್ತಿದ್ದೇನೆ. ಈಗ ಮಧ್ಯಂತರ ತೀರ್ಪಿನ ಪ್ರತಿಗೆ ಬೆಂಕಿ ಹಚ್ಚುವುದಕ್ಕೆ ಹೊರಟಿದ್ದರು. ಅದರ ಅವಶ್ಯಕತೆ ನನಗೆ ಕಾಣಿಸುತ್ತಿಲ್ಲ. ಏಕೆಂದರೆ ಕಳೆದ ಅಧಿವೇಶನದಲ್ಲಿ ನಾವು ಸರ್ವಾನುಮತವಾಗಿ ಒಂದು ನಿರ್ಣಯವನ್ನು ಪಾಸ್ ಮಾಡಿದ್ದೇವೆ. ಅಲ್ಲವೇ ಸಭಾನಾಯಕರೇ? ಮಧ್ಯಂತರ ತೀರ್ಪನ್ನು ಈ ಸದನವು ಸರ್ವಾನುಮತದಿಂದ ತಿರಸ್ಕಾರ ಮಾಡಿದೆ ಎಂದು ನಿರ್ಣಯ ಮಾಡಿದ ಮೇಲೆ ಮತ್ತೆ ಅದಕ್ಕೆ ಬೆಂಕಿ ಹಚ್ಚುವ ಅವಶ್ಯಕತೆ ನನಗೆ ಕಾಣಿಸುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್ : ನನಗೆ ಕಾಣಿಸುತ್ತಾ ಇದೆಯೆಂದು ಹೇಳುತ್ತಿದ್ದೇನೆ.

ಶ್ರೀ ಆರ್. ದಯಾನಂದರಾವ್ : ವಾಟಾಳ್ ನಾಗರಾಜ್‌ರಿಗೆ ಬರೀ ಬೆಂಕಿ ಹಚ್ಚುವ ಕೆಲಸವೇ ಆಗಿದೆ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೇ, ಈಗ ನಡೆದಿರತಕ್ಕ ಘಟನೆಯನ್ನು ಈ ಸಂದರ್ಭದಲ್ಲಿ ನಾನು ತೀವ್ರವಾಗಿ ಖಂಡಿಸುತ್ತೇನೆ. ಈ ಸದನವೂ ಖಂಡಿಸುತ್ತದೆ ಎನ್ನುವ ನಂಬಿಕೆಯನ್ನು ಇಟ್ಟುಕೊಂಡಿದ್ದೇನೆ. ಜೊತೆಗೆ ಮಾನ್ಯ ವಿರೋಧ ಪಕ್ಷದ ನಾಯಕರೂ ಖಂಡಿಸುತ್ತಾರೆ ಎನ್ನುವ ನಂಬಿಕೆಯನ್ನು ಸ್ಪಷ್ಟವಾಗಿ ಇಟ್ಟುಕೊಂಡಿದ್ದೇನೆ. ಅವರ ಪಕ್ಷ ಅಥವಾ ವಿರೋಧ ಪಕ್ಷದ

ಪರವಾಗಿ ಖಂಡಿಸುತ್ತಾರೆನ್ನುವ ನಂಬಿಕೆ ಇದೆ. ಇದು ಎಂದೂ ಕೂಡ ಘನತೆ ಗೌರವ ತರತಕ್ಕ ರೀತಿ ಅಲ್ಲ, ವಿಧಿ ವಿಧಾನ ಅಲ್ಲ, ಇದು ಕರ್ನಾಟಕ ರಾಜ್ಯಕ್ಕೆ ಎಂದೂ ಕೂಡ ಗೌರವ ತರುವುದಿಲ್ಲ. ತೀರ್ಪಿನ ಪ್ರತಿ ಸುಟ್ಟುಹಾಕುವುದು ಮತ್ತೊಂದು ಎಂಬ ವಿಚಾರ ಒಳ್ಳೆಯದಲ್ಲ. ಮಾನ್ಯ ಸದಸ್ಯರಾದ ಪ್ರೊಫೆಸರ್ ಅವರು ಕೇಳಿದ್ದಾರೆ. ಆ ತೀರ್ಪಿಗೆ ನಾವು ಯಾವ ರೀತಿಯ ಗೌರವವನ್ನು ಕೊಟ್ಟಿದ್ದೇವೆ, ಸರ್ಕಾರದವರು ಆದಿಯಾಗಿ ಭಾಗಿಯಾಗತಕ್ಕ ಸಂದರ್ಭದಲ್ಲಿ, ಮತ್ತೆ ನೀವು ಸುಡತಕ್ಕ ವಿಚಾರಕ್ಕೆ ತೆಗೆದುಕೊಂಡು ಬಂದರೆ ಅದು ಸರಿಯಲ್ಲ. ಕಡ್ಡಿಪೆಟ್ಟಿಗೆ ಯಾರ್ಯಾರ ಜೇಬಿನಲ್ಲಿ ಇದೆ ಎಂದರೆ, ನಿಮ್ಮ ಹಾಗೆ ಪ್ರತಿ ಸುಡುವುದಕ್ಕಾಗಲೀ, ಮತ್ತೊಂದು ಮಾಡುವುದಕ್ಕಾಗಲೀ, ಅವರು ಬೆಂಕಿಪೆಟ್ಟಿಗೆ ಇಟ್ಟುಕೊಂಡಿದ್ದಾರೆಂದು ನಾನು ಭಾವಿಸಿಲ್ಲ. ಒಂದು ವೇಳೆ ಮಾನ್ಯ ಸದಸ್ಯರು ಯಾರಾದರೂ ಇಟ್ಟುಕೊಂಡಿದ್ದರೆ, ಅದು ನನಗೆ ಗೊತ್ತಿಲ್ಲ. ನೀವೆಲ್ಲರೂ ಹಿರಿಯ ಮಾನ್ಯ ಸದಸ್ಯರು, ತೀರ್ಪಿನ ಪ್ರತಿಯನ್ನು ಸುಡುತ್ತೇವೆ, ಸುಡುತ್ತೇವೆ ಎನ್ನುವ ದೃಷ್ಟಿಯಿಂದ, ಈ ರೀತಿ ಮುಂದೆ ಬಂದರೆ, ನಾಳೆ ಸದನದ ಗೌರವ ಏನಾಗುತ್ತದೆ, ನಾವು ಯಾವ ದಿಸೆಯಲ್ಲಿ ಸಾಗುತ್ತಿದ್ದೇವೆ ಎನ್ನುವುದನ್ನು ತಾವು ವಿಚಾರ ಮಾಡಬೇಕಾಗುತ್ತದೆ, ನನಗೆ ಇವತ್ತು ಕಾವೇರಿ ವಿಚಾರದ ಬಗ್ಗೆ ಚರ್ಚೆ ಮಾಡಬೇಕು, ಮತ್ತೊಂದು ಮಾಡತಕ್ಕಂಥ ಸಂದರ್ಭದಲ್ಲಿ, ಪ್ರತಿಯನ್ನು ಸುಟ್ಟುಹಾಕತಕ್ಕ ವಿಚಾರ ನಿಮ್ಮ ಹತ್ತಿರ ಚರ್ಚೆ ಮಾಡಿದ್ದಾರೆಂದು ನಾನು ತಿಳಿದುಕೊಂಡಿಲ್ಲ. ಇದು ನಿಮಗೆ ಗೊತ್ತಿಲ್ಲದೆ ನಡೆದಿರಬಹುದು ಎನ್ನುವುದು ನನ್ನ ಭಾವನೆ. ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಅಧ್ಯಕ್ಷರ ಮೂಲಕ ಹೇಳತಕ್ಕಂಥ ಮಾತು. ಏಕೆಂದರೆ, ಇದು ಸಣ್ಣ ವಿಚಾರ ಅಲ್ಲ, ಬಹಳ ತೀವ್ರವಾಗಿ ಪರಿಗಣಿಸಬೇಕಾದ ವಿಚಾರ. ಇದನ್ನು ಯಾವ ರೀತಿಯಾಗಿ ಕಾಣಬೇಕು ಎನ್ನುವುದು ಬೇರೆ ದಾರಿ. ಆದರೆ, ಬೆಂಕಿ ಪೆಟ್ಟಿಗೆ ತೆಗೆದುಕೊಂಡು ಅಥವಾ ಲೈಟರ್ ತೆಗೆದುಕೊಂಡು ಪ್ರತಿಯನ್ನು ಸುಡುವುದಕ್ಕೆ ವಿಚಾರ ಮಾಡುತ್ತಾತಹೋದರೆ, Where is the end for all these things? I cannot understand. ಇದನ್ನು ಮಾನ್ಯ ವಿರೋಧಪಕ್ಷದ ನಾಯಕರ ವಿವೇಚನೆಗೆ ಬಿಡುತ್ತೇನೆ. ಇದರ ಬಗ್ಗೆ ನೀವು ಏನು ಹೇಳುತ್ತೀರೋ ನನಗೆ ಗೊತ್ತಿಲ್ಲ. ಆದರೆ, ಈ ಸದನದ ಪರವಾಗಿ, ಸರ್ಕಾರದ ಪರವಾಗಿ, ನಮ್ಮ ಪಕ್ಷದ ಪರವಾಗಿ ಮತ್ತು ತಮ್ಮೆಲ್ಲರ ಪರವಾಗಿ, ತಾವೆಲ್ಲರೂ ಒಪ್ಪಿಗೆ ಕೊಡುತ್ತೀರಿ ಎನ್ನುವ ನಂಬಿಕೆಯಿಂದ ಇದನ್ನು ತೀವ್ರವಾಗಿ ಖಂಡಿಸುತ್ತೇನೆ. ಇದು ಎಂದೂ ಕೂಡ ಗೌರವ ತರತಕ್ಕ ವಿಚಾರ ಅಲ್ಲ. ನಾನು ಇಷ್ಟು ಮಾತನ್ನು ಹೇಳಿ, ದಯಮಾಡಿ ಅಧ್ಯಕ್ಷರು ಮಾನ್ಯ ಸದಸ್ಯರ ಹತ್ತಿರ, ಬೆಂಕಿಪೆಟ್ಟಿಗೆ ಅಥವಾ ಲೈಟರ್ ಏನಿದೆ ಅದನ್ನು ಕಳುಹಿಸಿಕೊಡಿ ಎಂದು ಹೇಳಿದ್ದಾರೆ. ಆದರೆ, ನೀವು ಇನ್ನೂ ಕೂಡ ಅವುಗಳನ್ನು ಹಿಡಿದುಕೊಂಡಿದ್ದೀರಿ, ನನ್ನ ಅನಿಸಿಕೆ, ಇನ್ನೂ ಸರಿಯಾಗಿ ಸುಟ್ಟಿಲ್ಲ ಅಥವಾ ಬೆಂಕಿ ಹತ್ತಿಲ್ಲ, ಅವರಿಗೆ ಪ್ರತಿಯನ್ನು ಸುಡಬೇಕೆಂಬ ವಿಚಾರ ಇರಬೇಕೆಂದು ನನ್ನ ಅನಿಸಿಕೆ. ಅದು ಒಳ್ಳೆಯದಲ್ಲ.

ಅಧ್ಯಕ್ಷರು : ಇಲ್ಲ, ಬಿಟ್ಟುಬಿಟ್ಟಿದ್ದಾರೆ.

ಶ್ರೀ ಎಸ್. ಬಂಗಾರಪ್ಪ : ಅದು ನನಗೆ ಗೊತ್ತಿಲ್ಲ, ತಮ್ಮ ನಂಬಿಕೆ ಆ ರೀತಿ ಇದ್ದು, ಅವರಿಗೆ ಆ ರೀತಿಯ ವಿಚಾರ ಇದ್ದರೆ ಒಳ್ಳೆಯದು. ಆದರೆ, ಈಗಾಗಲೇ ಬೆಂಕಿಕಡ್ಡಿಯನ್ನು ತೆಗೆದುಕೊಂಡು ಸುಟ್ಟಿರತಕ್ಕಂಥಾದ್ದು, ಆ ಪ್ರಯತ್ನ ನಡೆದಿರತಕ್ಕಂಥಾದ್ದು ಎಲ್ಲರೂ ಕಣ್ಣಾರೆ ಕಂಡಿರತಕ್ಕಂಥಾದ್ದು.

ಶ್ರೀ ವಾಟಾಳ್ ನಾಗರಾಜ್ : ನಾನು ಇಲ್ಲ ಎಂದು ಹೇಳುತಕ್ಕಂಥ ಪ್ರಶ್ನೆಯೇ ಇಲ್ಲ. ಮಾನ್ಯ ಮುಖ್ಯಮಂತ್ರಿಗಳು ಏನೇನು ಹೇಳಬೇಕೋ, ಹೇಳಲಿ, ಅವರಿಗೆ ಸ್ವಾತಂತ್ರ್ಯ ಇದೆ, ನನ್ನದೇನೂ ಅಭ್ಯಂತರ ಇಲ್ಲ. ಅವರು ಖಂಡನೆ ಮಾಡಲಿ, ಬಹುಶಃ ಅನಾಗರೀಕ ಎಂದು ಹೇಳಲಿ, ಏನು ಬೇಕಾದರೂ ಹೇಳಲಿ, ನನ್ನ ಕರ್ತವ್ಯ ಏನು ಮಾಡಬೇಕೋ ಅದನ್ನು ಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ತಾವು ಇವತ್ತು ಏನೂ ಮಾಡುವುದಿಲ್ಲವೆಂದು ಹೇಳಿದರೂ ಕೂಡ, ಅವರು ಸುಡುತ್ತೇನೆಂದೇ ಹೇಳುತ್ತಿದ್ದಾರೆ, ಮಾನ್ಯ ಸದಸ್ಯರು ಮತ್ತೆ ಹೇಳಿದ್ದಾರೆ. ಇದರ ಅರ್ಥ ಅವರ ಪ್ರಯತ್ನ ಪ್ರಾರಂಭವಾಗಿದೆ, ಅದು ಇನ್ನೂ ಮುಂದುವರಿದಿದೆ ಎಂದೇ ಅರ್ಥ.

ಅಧ್ಯಕ್ಷರು : ಪ್ರಕ್ರಿಯೆ ಪ್ರಾರಂಭವಾಗಿದೆ.

ಶ್ರೀ ಎಸ್. ಬಂಗಾರಪ್ಪ : ಪ್ರಕ್ರಿಯೆ ಅವಶ್ಯಕತೆ ಇಲ್ಲ, ಕ್ರಿಯೆ ಆರಂಭವಾಗಿದೆ, ಕ್ರಿಯೆ ಮುಂದುವರಿದಿದೆ. ಇದು ಎಂದೂ ಕೂಡ ಒಳ್ಳೆಯದಾಗುವುದಿಲ್ಲ. ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ವಿನಂತಿ ಮಾಡುತ್ತೇನೆ. ಅದು ಒಳ್ಳೆ.ಯದಲ್ಲ, ಬೇಡ. ಈ ತಪ್ಪಿಗೆ ವಿಷಾದ ಸೂಚಿಸುವುದು ಬಹಳ ಒಳ್ಳೆಯದು. ಮೊದಲು ಈ ಸದನಕ್ಕೆ ಗೌರವ ಬರಬೇಕು, ಇದು ಎಂದೂ ಕೂಡ ಒಳ್ಳೆಯದಾಗಲಾರದು. ಇದನ್ನು ಅಲ್ಲಿಗೇ ಕೈಬಿಡಬೇಕು, ನೀವು ವಿಷಾದ ಸೂಚನೆ ಮಾಡದಿದ್ದರೆ, ಈ ಸದನ ಅವರ ಪ್ರಕ್ರಿಯೆಯನ್ನು ಖಂಡಿಸುತ್ತದೆ ಎನ್ನುವ ಪ್ರಸ್ತಾವನೆಯನ್ನು ಸಭಾನಾಯಕನಾಗಿ ಇಟ್ಟುಕೊಂಡಿದ್ದೇನೆ. ಇಷ್ಟು ವಿಚಾರಗಳನ್ನು ತಮ್ಮ ಗಮನಕ್ಕೆ ಮತ್ತು ಸದನದ ಗಮನಕ್ಕೆ ತಂದಿದ್ದೇನೆ.

Mr. Speaker : The operative portion of the resolution of this House was : ನಾವು ದಿನಾಂಕ 25–6–90ರಂದು ಕಾವೇರಿ ಜಲವಿವಾದದ ಬಗ್ಗೆ, ಕಾವೇರಿ ನ್ಯಾಯಾಧೀಕರಣ ನೀಡಿರುವ ಮಧ್ಯಂತರ ಆಜ್ಞೆ, ಕರ್ನಾಟಕ ರಾಜ್ಯದ ಹಿತಕ್ಕೆ ಮಾರಕವಾಗಿರುವುದರಿಂದ ಮತ್ತು ಟ್ರಿಬ್ಯುನಲ್‌ನ ಕಾರ್ಯವ್ಯಾಪ್ತಿಗೆ ಚರ್ಚೆ ಹೊರತಾಗಿದ್ದು, ಕಾನೂನು, ವಾಸ್ತವಿಕತೆ ಹಾಗೂ ವ್ಯವಹಾರಿಕತೆಗೆ ಬಹಳ ದೂರವಾಗಿರುವುದರಿಂದ, ಈ ಸಭೆಯು ಮಧ್ಯಂತರ ಆಜ್ಞೆಯನ್ನು ತಿರಸ್ಕರಿಸಬೇಕೆಂಬ ಸರ್ವಾನುಮತದಿಂದ ಸರ್ಕಾರವನ್ನು ಒತ್ತಾಯಿಸುತ್ತದೆ. ನೀವು, ಅವರು ಹೀಗೆ ಎಲ್ಲರೂ ಇದಕ್ಕೆ ಭಾಗಿಗಳಾಗಿದ್ದೇವೆ. ಹಾಗಿರುವಾಗ ಇದನ್ನು ಸುಡತಕ್ಕ ಪ್ರಶ್ನೆ ಏಕೆ ಬರುತ್ತದೆ?

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ನಾನು ಈ ವಿಚಾರದಲ್ಲಿ ಒಂದು ಹಕ್ಕುಚ್ಯುತಿ ನಿರ್ಣಯವನ್ನು ಕಳುಹಿಸಿದ್ದೇನೆ.

ಅಧ್ಯಕ್ಷರು : ಅದನ್ನೂ ಚರ್ಚೆ ಮಾಡೋಣ.

ಶ್ರೀ ಡಿ.ಬಿ. ಚಂದ್ರೇಗೌಡ : ವಾಟಾಳ್ ನಾಗರಾಜ್‌ರಿಗೆ ಬೆಂಕಿಕಡ್ಡಿ ಹಚ್ಚುವ ವಿಚಾರವೇ ಗೊತ್ತಿಲ್ಲ, ಅವರಿಗೆ ಲೈಟರ್ ಹಚ್ಚುವುದಕ್ಕೆ ಬರುವುದಿಲ್ಲ.

ಅಧ್ಯಕ್ಷರು : ನನಗೆ ತಿಳಿದಹಾಗೆ ಮಾನ್ಯ ವಾಟಾಳ್ ನಾಗರಾಜ್‌ರವರಿಗೆ ದುಶ್ಚಟಗಳು ಯಾವುದೂ ಇಲ್ಲ. ಕಾಫಿ, ಟೀ ಇತ್ಯಾದಿ ಉಪಯೋಗಿಸುವುದನ್ನು ಅವರು ಕಲಿತಿಲ್ಲ. ಈ ಇಳಿವಯಸ್ಸಿನಲ್ಲಿ ಈಗ ಏತಕ್ಕೆ ಬೆಂಕಿಕಡ್ಡಿ ಉಪಯೋಗಿಸಲು ಪ್ರಾರಂಭ ಮಾಡುತ್ತಿದ್ದಾರೋ ಗೊತ್ತಾಗುತ್ತಿಲ್ಲ.

Sri. Quonarul Islam:- He is not a smoker. He does not know to use the lighter.

ಶ್ರೀ ಡಿ. ಬಿ. ಚಂದ್ರೇಗೌಡ :– ಈಗ ಲೈಟರನ್ನು ಹಚ್ಚುವ ಅಭ್ಯಾಸ ಮಾಡುತ್ತಿದ್ದಾರೆ. ಬಹಳ ಹಿಂದಿನಿಂದಲೂ ಇಲ್ಲ, ಮಾಡಿಲ್ಲ, ಈಗ ಏತಕ್ಕೆ ಮೊದಲನೇ ಸಲ ಮಾಡುತ್ತಿದ್ದಾರೋ ಗೊತ್ತಿಲ್ಲ.

ಅಧ್ಯಕ್ಷರು : – ವಯಸ್ಸಾಗುತ್ತಿದೆ ಬೇಡ,

ಶ್ರೀ ವಾಟಾಳ್ ನಾಗರಾಜ್ :– ನನ್ನ ಮನವಿ ಏನೆಂದರೆ.....

ಅಧ್ಯಕ್ಷರು : – ಅವರು ಏನೋ ಮನವಿ ಮಾಡುತ್ತಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ :– ಈಗ ಜ್ವಾಲೆಯನ್ನು ಏನು ಹಚ್ಚುತ್ತಿದ್ದಾರೆ ಅದು ನನಗೆ ಅರ್ಥವಾಗುತ್ತಿಲ್ಲ. ಕಾವೇರಿ ಜ್ವಾಲೆ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ :– ನಿಮಗೆ ಅರ್ಥವಾಗದಿದ್ದರೆ ನಾನು ಏನು ಮಾಡಲಿ. ಅದುದರಿಂದ ನಾನು ಅವರಲ್ಲಿ ಮನವಿ ಮಾಡುತ್ತೇನೆ, ಮಾನ್ಯ ಸಭಾನಾಯಕರು ಈ ಬಗ್ಗೆ ನಮ್ಮ ಪಕ್ಷದ ಅಭಿಪ್ರಾಯ ಏನು ಮತ್ತೊಂದು ಏನು ಎಂದು ಕೇಳಿದರು, ಇದು ಸಾರ್ವತ್ರಿಕವಾಗಿ ಕೇಳತಕ್ಕಂಥ ಹೇಳತಕ್ಕಂಥ ಪ್ರಶ್ನೆ ಅಲ್ಲ. ಇಡೀ ರಾಜ್ಯದ ನದಿಗೆ ಬೆಂಕಿ ಬಿದ್ದಿರುವಾಗ, ಆ ತೀರ್ಪಿಗೆ ಬೆಂಕಿ ಹಚ್ಚುವುದು ಏನಿದೆ, ಅದು ಮಾನಸಿಕವಾದ ವೇದನೆ, ಅದನ್ನು ನಾನು ಅವರಿಗೆ ಹೇಳುತ್ತೇನೆ :

ಶ್ರೀ ಆರ್. ದಯಾನಂದರಾವ್ :– ಹೊರಗಡೆ ಮಾಡಿ, ಸದನದಲ್ಲಿ ಬಂದು ಈ ರೀತಿ ಮಾಡಿದರೆ ಹೇಗೆ ?

ಶ್ರೀ ಡಿ.ಬಿ. ಚಂದ್ರೇಗೌಡ :– ನನಗೆ ಅರ್ಥ ಆಯಿತು, ನಿಮ್ಮ ಹೃದಯ ವೇದನೆ. ಈ ಕೆಲಸ ಕೈಬಿಡಿ ಎಂದು ನಾನು ಅವರಲ್ಲಿ ಮನವಿ ಮಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) :– ಬೆಂಕಿ ಹಚ್ಚಿದ್ದರ ಬಗ್ಗೆ ತಾವು ಏನೂ ಹೇಳಲಿಲ್ಲ ತಮ್ಮದು ಸಾಹಿತ್ಯ ರೂಪದಲ್ಲಿ ಭಾಷಣ ಆಯಿತು, ಬೆಂಕಿ ಬಿದ್ದಿದೆ ಹೃದಯಕ್ಕೆ ಬೆಂಕಿ ಬಿದ್ದಿದೆ, ಜ್ವಾಲೆ ಅಡಗಿದೆ, ಬುಗ್ಗೆ ಬುಗ್ಗೆಯಾಗಿ ಎದ್ದಿದೆ ಎಂದೆಲ್ಲಾ ಹೇಳುವುದು ಅದು ಬೇರೆ. ನಾನು ಹೇಳುವುದು ಈಗ ಇಲ್ಲಿ ಬೆಂಕಿ ಹಚ್ಚಿದ್ದಾರಲ್ಲ ಅದನ್ನು ತಾವು ಒಪ್ಪುತ್ತೀರೋ? ಇಲ್ಲವೋ, ಅದನ್ನು ತಾವು ದಯಮಾಡಿ ಹೇಳಿರಿ. ವಿರೋಧ ಪಕ್ಷದ ನಾಯಕರು ಇದರ ಬಗ್ಗೆ ಏನು ಹೇಳುತ್ತಾರೆ ? ನಾವೂ ಸ್ವಲ್ಪ ಕೇಳೋಣ, ಹೇಳಿ.

ಶ್ರೀ ಡಿ.ಬಿ. ಚಂದ್ರೇಗೌಡ :– ಈ ವೇದಿಕೆ, ಇಡೀ ಸದನದ ಒಟ್ಟು ಅಭಿಪ್ರಾಯ ಸಂಗ್ರಹಿಸತಕ್ಕ ವೇದಿಕೆ ಅಲ್ಲ. ಒಬ್ಬೊಬ್ಬರದ್ದೇ ಒಂದೊಂದು ರೀತಿ, ಒಬ್ಬೊಬ್ಬರೇ ಸದಸ್ಯರು ತಮ್ಮದೇ ಆದ ರೀತಿಯಲ್ಲಿ ಮಾಡುತ್ತಾರೆ. ನಾವು ಕೆಲವೊಂದು ಚೌಕಟ್ಟುಗಳನ್ನು ನಿರ್ಮಾಣ ಮಾಡಿಕೊಂಡಿದ್ದೇವೆ. ಆ ಚೌಕಟ್ಟಿನೊಳಗಡೆ ನಾವು ಇರಬೇಕು. ಅಧ್ಯಕ್ಷರು ಆಗಲೇ ಅಪ್ಪಣೆ ಕೊಡಿಸಿದ್ದಾರೆ. ನಿಮ್ಮ ಶಾಸನದ ಚೌಕಟ್ಟಿನ ಒಳಗಡೆ ಕೆಲಸ ಮಾಡಿ ಎಂದು ಹೇಳಿದ್ದಾರೆ. ಅದರಲ್ಲಿ ಬೆಂಕಿ ಹಚ್ಚುವುದು ಇಲ್ಲ.

ಶ್ರೀ ಎಸ್. ಬಂಗಾರಪ್ಪ :– ಇಲ್ಲ ಎಂದಮೇಲೆ ನೀವು ಅದನ್ನು ಒಪ್ಪುತ್ತೀರೋ? ಅದನ್ನು ನೀವು ಹೇಳುವುದಿಲ್ಲ; ನನಗೆ ಗೊತ್ತಿದೆ.

ಶ್ರೀ ವಾಟಾಳ್ ನಾಗರಾಜ್ :– ನಾನು ಹೇಳುವುದು ಇಷ್ಟೇ ;

ಶ್ರೀ ಎಲ್ ಆರ್. ಶಿವರಾಮೇಗೌಡ:– ಕ್ಷಮೆ ಕೇಳಿಬಿಡಿ

ಶ್ರೀ ವಾಟಾಳ್ ನಾಗರಾಜ್ :– ನಾನು ಕ್ಷಮೆ ಕೇಳುವಂತಹ ಅವಕಾಶ ಬಂದಾಗ ನಾನು ಕೇಳುತ್ತೇನೆ. ನಿಮ್ಮ ತರಹ ಹತ್ತತ್ತು ಸಾರಿ ನಾನು ಕ್ಷಮೆ ಕೇಳುವುದಕ್ಕೆ ಹೋಗುವುದಿಲ್ಲ.

ಮಾನ್ಯ ಅಧ್ಯಕ್ಷರೇ ನಾನು ಬೆಂಕಿ ಹಚ್ಚಿದ್ದನ್ನು ನಾನು ಸಮರ್ಥನೆ ಮಾಡಿಕೊಳ್ಳುತ್ತಿದ್ದೇನೆ. ನಾನು ಅದನ್ನು ಸಮರ್ಥನೆ ಮಾಡುತ್ತೇನೆಯೇ, ಹೊರತು ಹೋಗುವುದಕ್ಕೆ ನಾನು ತಯಾರಾಗಿಲ್ಲ. ನನ್ನ ಉದ್ದೇಶ ಏನು? ನನ್ನ ಭಾವನೆ ಏನು? ನನ್ನ ಭಾವನೆಯನ್ನು ತಾವು ಅರ್ಥ ಮಾಡಿಕೊಂಡಿದ್ದೀರಿ. ಬಹುಶಃ ಮಾನ್ಯ ಮುಖ್ಯಮಂತ್ರಿಗಳು ಆವೇಶದಲ್ಲಿ ಇಡೀ ಸದನ ವಾಟಾಳ್ ನಾಗರಾಜ್‌ರವರನ್ನು ಖಂಡಿಸುತ್ತದೆ ಎಂಬ ಭಾವನೆ ಇದೆ ಎಂದು ಹೇಳಿದರು. ನಾನು ಅವರಿಗೆ ಹೇಳುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ :– ಆವೇಶ ಏನು ಬಂತು, ಆವೇಶದ ಪ್ರಶ್ನೆ ಅಲ್ಲ. ಇದನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು. ಬೆಂಕಿ ಹಚ್ಚಿದ್ದು ತಪ್ಪು ಎಂಬುದನ್ನೂ ಕೂಡಾ ಒಪ್ಪಿಕೊಳ್ಳದೇ ಇದ್ದರೆ, ಆವೇಶದ ಪ್ರಶ್ನೆ ಏನು ಬಂತು.?

ಶ್ರೀ ವಾಟಾಳ್ ನಾಗರಾಜ್:– ಈ ಸದನದ ನಿರ್ಣಯಕ್ಕೆ ವಿರುದ್ಧವಾಗಿ ನೀವು ನಡೆದುಕೊಂಡಿದ್ದೀರಿ.

ಅಧ್ಯಕ್ಷರು :– ಅದು ಬೇರೆ;

ಶ್ರೀ ಎಸ್. ಬಂಗಾರಪ್ಪ :– ಅದು ಬೇರೆ ವಿಷಯ .....

ಶ್ರೀ ವಾಟಾಳ್ ನಾಗರಾಜ್ :– ನಾನು ಅದಕ್ಕಾಗಿ ಹೇಳುತ್ತೇನೆ, ವಾಟಾಳ್ ನಾಗರಾಜ್ ಬೆಂಕಿ ಹಚ್ಚಿಬಿಟ್ಟರಲ್ಲ ಎಂದು ನನ್ನ ಬಗ್ಗೆ ನಿಮ್ಮ ಕರುಣೆ ಬೇಡ, ವಿಷಾದ ಬೇಡ, ಏನೋ ಮಾಡಿ ಬಿಟ್ಟರಲ್ಲ ಎಂದು ಒಂದು ಭಯಂಕರವಾದ ರೀತಿನೀತಿಗಳು ಬೇಡ. ಸದನದಲ್ಲಿ ಯಾವರೀತಿ ಇರಬೇಕು, ಯಾವರೀತಿ ನಡೆದುಕೊಳ್ಳಬೇಕು ಎಂದು ನನಗೆ ಗೊತ್ತಿದೆ. ಇವತ್ತು ಈ ಒಂದು ತೀರ್ಪು ಕನ್ನಡಿಗರ ಮರಣ ಶಾಸನವಾಗಿದೆ. ಈ ಒಂದು ಪರಿಸ್ಥಿತಿಯಲ್ಲಿ ನಾನು ಹೇಳಿದ್ದೇನೆ, ಒಳಗಡೆ ಹೇಳಿದ್ದೇನೆ, ಇಂಥಹ ಪರಿಸ್ಥಿತಿಯಲ್ಲಿ ಮತ್ತೆ ನಾನು ಏನು ಮಾಡಬೇಕೆಂದು ತಾವು ಹೇಳಬೇಕು.

ಅಧ್ಯಕ್ಷರು :– ಏನು ಮಾಡಬೇಕೆಂದು ಹೇಳುತ್ತೇನೆ. ಈಗ ಸದನ ಮುಂದುವರಿದು ಮಧ್ಯಾಹ್ನ ಎರಡೂವರೆ ಗಂಟೆಗೆ ಮತ್ತೆ ಸಮಾವೇಶವಾಗುತ್ತದೆ.

(ಸದನವು ಪುನಃ 3 ಗಂಟೆಗೆ ಸಮಾವೇಶಗೊಂಡಿತು)

ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ) :– ಮಾನ್ಯ ಅಧ್ಯಕ್ಷರೇ, ಇವತ್ತು ಕಾವೇರಿ ಜಲವಿವಾದದ ಒಂದು ಸಂದರ್ಭದಲ್ಲಿ ನಾವು ಒಂದು ಪ್ರಿವಿಲೇಜ್ ಮೋಷನ್‌ನ್ನು ಕಳುಹಿಸಿಕೊಟ್ಟಿದ್ದೇವೆ. ಅದರ ಬಗ್ಗೆ ಈಗ ಚರ್ಚೆ ಪ್ರಾರಂಭವಾಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಅದೂ ಅಲ್ಲದೆ ನಾನು ತಮಗೆ ಕುಣಿಗಲ್‌ನಲ್ಲಿ ನಡೆದ ಘಟನೆಯ ಬಗ್ಗೆ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೇನೆ. ಎರಡನೆಯದಾಗಿ ಹೈಕೋರ್ಟ್ ಮುಂದೆ ಅಡ್ವೊಕೇಟ್ ಏನು ಸ್ಟ್ರೈಕ್ ಮಾಡುತ್ತಿದ್ದಾರೆ ಆ ಹಂಗರ್ ಸ್ಟ್ರೈಕ್ ನಿಲ್ಲಬೇಕು, ಅದರ ಬಗ್ಗೆ ಸರಕಾರ ಕ್ರಮ ತೆಗೆದುಕೊಳ್ಳಬೇಕೆಂದು ಒಂದು ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೇನೆ. ಈ ರೀತಿ ಪ್ರಮುಖವಾದ ಕೆಲವು ನೋಟೀಸುಗಳನ್ನು ನಾವು ಕಳುಹಿಸಿಕೊಟ್ಟಿದ್ದೇವೆ. ಇವುಗಳ ಬಗ್ಗೆ ಚರ್ಚೆಯಾಗುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕು. ಈ ಅಧಿವೇಶನ ಮುಂದುವರೆಯುವ ಸಂದರ್ಭ ಇಲ್ಲ ಎಂದು ಚರ್ಚೆಯಲ್ಲಿ ವ್ಯಕ್ತವಾಗಿರುವುದರಿಂದ, ರಾತ್ರಿ ಎಷ್ಟು ಹೊತ್ತಾದರೂ ನಾವು ಕುಳಿತುಕೊಳ್ಳುವುದಕ್ಕೆ ಸಿದ್ಧವಾಗಿದ್ದೇವೆ. ನಾವೇನು ಪ್ರಮುಖವಾದ ವಿಷಯಗಳನ್ನು ನೋಟೀಸ್ ಮೂಲಕ ಕಳುಹಿಸಿಕೊಟ್ಟಿದ್ದೇವೆ ಅದರ ಬಗ್ಗೆ ಚರ್ಚೆಗೆ ತಾವು ಅವಕಾಶ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ (ವೇಮಗಲ್) :– ಮಾನ್ಯ ಅಧ್ಯಕ್ಷರೇ, ಒಂದು ವಿಚಾರವನ್ನು ತಮ್ಮ ಗಮನಕ್ಕೆ ತಮ್ಮ ಕೊಣೆಯಲ್ಲೂ ತಂದಿದ್ದೇನೆ, ಈ ಸದನದಲ್ಲೂ ಪ್ರಸ್ತಾಪ ಮಾಡಿದ್ದೇನೆ. ವಿಷಯ ಏನೆಂದರೆ, ರೇಷ್ಮೆ ಗೂಡಿನ ಬೆಲೆ ಸುಮಾರು 200–220 ರೂಪಾಯಿ ಇದ್ದುದು ಈಗ 50–60 ರೂಪಾಯಿಗೆ ಇಳಿದಿದೆ. ರೇಷ್ಮೆ ಉತ್ಪಾದನೆ ಜಾಸ್ತಿಯಾಗಬೇಕು, ದೇಶಕ್ಕೆ ವಿದೇಶಿ ವಿನಿಮಯ ತರಬೇಕೆನ್ನತಕ್ಕಂಥಾದ್ದು ಒಂದು ಕಡೆ ಇದ್ದು, ಇನ್ನೊಂದು ಕಡೆ ನೋಡಿದರೆ ಹೊರದೇಶದಿಂದ ರೇಷ್ಮೆಯನ್ನು ತರಿಸುತ್ತಿರತಕ್ಕಂಥಾದ್ದು ಇದಕ್ಕೆ ಮೂಲ ಕಾರಣವಾಗಿದೆ. ಇದರ ಬಗ್ಗೆ ವಿಸ್ತಾರವಾಗಿ ಚರ್ಚೆ ಆಗಬೇಕಾಗಿದೆ. ನಾನು ಇದರ ಬಗ್ಗೆ ಒಂದು ಗಮನಸೆಳೆಯುವ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೇನೆ. ತಾವು ಅದಕ್ಕೆ ಉತ್ತರ ಕೊಡಲು ಸರಕಾರಕ್ಕೆ ತಿಳಿಸಬೇಕೆಂದು ನನ್ನ ಮನವಿಯನ್ನು ತಮ್ಮ ಮುಂದೆ ಇಟ್ಟಿದ್ದೇನೆ.

ಹಕ್ಕುಚ್ಯುತಿ ಪ್ರಸ್ತಾವ

ವಿಷಯ : ಕಾವೇರಿ ಜಲವಿವಾದದಲ್ಲಿ ಇಡೀ ಸದನದ ಹಕ್ಕುಚ್ಯುತಿ ಆಗಿರುವ ಬಗ್ಗೆ

ಶ್ರೀ ಡಿ.ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ನಿಯಮ 190ರ ಪ್ರಕಾರ ನಾನು ಒಂದು ಹಕ್ಕುಚ್ಯುತಿ ಪ್ರಸ್ತಾವನೆಯನ್ನು ಎತ್ತುವುದಕ್ಕೆ ತಮ್ಮ ಅನುಮತಿಯನ್ನು ಕೇಳುವುದಕ್ಕೆ ನಿಂತಿದ್ದೇನೆ. ಪೂರ್ವಭಾವಿಯಾಗಿ ನನ್ನ ವಾದ ಏನೆಂದರೆ ಇದರಲ್ಲಿ ಇಡೀ ಸದನದ ಹಕ್ಕುಚ್ಯುತಿ ಆಗಿದೆ ಎಂಬುದು, ಅದು ಕೇವಲ ಸದಸ್ಯರದ್ದಲ್ಲ. ಆದುದರಿಂದ ಈ ಸದನದ ಹಕ್ಕುಚ್ಯುತಿ ನಿರ್ಣಯಕ್ಕೆ ಪ್ರತಿಪಕ್ಷದ ಎಲ್ಲಾ ಮುಖಂಡರೂ ಸಹಿ ಹಾಕಿ ಒಟ್ಟಿಗೆ ಕಳುಹಿಸಿದ್ದೇವೆ. ಶ್ರೀಮಾನ್ ಚಂದ್ರೇಗೌಡರು, ಶ್ರೀಮಾನ್ ಯಡಿಯೂರಪ್ಪನವರು, ಬೈರೇಗೌಡರು, ವಾಟಾಳ್ ನಾಗರಾಜ್‌ರವರು, ಪಿ.ಸಿ. ಸಿದ್ದನಗೌಡರವರು ಹೀಗೆ ನಾವು ಅನೇಕ ಜನರು ಸಹಿ ಹಾಕಿ ಕಳುಹಿಸಿದ್ದೇವೆ.

ಶ್ರೀ ವೈ. ರಾಮಯ್ಯ (ಕುಣಿಗಲ್) : ಮಾನ್ಯ ಅಧ್ಯಕ್ಷರೇ, ಅದಕ್ಕೆ ನಾನು ರುಜು ಮಾಡಿಲ್ಲ. ರುಜು ಮಾಡದೇ ಹೋದರೂ ಮಾತನಾಡುವುದಕ್ಕೆ ಅವಕಾಶ ಇದೆ ಎಂದು ಭಾವಿಸಿಕೊಂಡಿದ್ದೇನೆ. ಈ ನಿರ್ಣಯದ ಬಗ್ಗೆ ಈ ಮನೆಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುವುದಾದರೆ ನನಗೂ ಮಾತನಾಡುವುದಕ್ಕೆ ಅವಕಾಶ ಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.